# ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಉದ್ಯಮ)

MD RGRHCL 01 BIS 11 2010 | 11404 Date: 20.10.2010

**ಅತೀ ಪ್ರಾಮುಖ್ಯ**

ಇವರಿಗೆ,

ರಾಜ್ಯದ ಎಲ್ಲಾ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು
ಜಿಲ್ಲಾ ಪಂಚಾಯತ್.
ರಾಜ್ಯದ ಎಲ್ಲಾ ಕಾರ್ಯನಿರ್ವಾಹಕ ಅಧಿಕಾರಿಗಳು
ತಾಲ್ಲೂಕು ಪಂಚಾಯತ್.

ಮಾನ್ಯರೇ,

ವಿಷಯ : **ಬಸವ ಇಂದಿರಾ ವಸತಿ ಯೋಜನೆಯಡಿ 2010-2011ನೇ ಶ್ರೇಣಿಯಡಿ ಹೆಚ್ಚುವರಿಯಾಗಿ 1000 ಮನೆಗಳನ್ನು ನಿಗಧಿಪಡಿಸಿರುವ ಬಗ್ಗೆ**

ಉಲ್ಲೇಖ
1. ಸರ್ಕಾರದ ಆದೇಶ ಸಂಖ್ಯೆ: ವಇ 86 ಹೆಚ್‌ಎಎಂ 2009, ಬೆಂಗಳೂರು, ದಿನಾಂಕ: 13.04.2010
2. ನಿಗಮದ ಪತ್ರ ಸಂಖ್ಯೆ MD RGRHCL 01 SDP 01 2010, Dated: 21.07.2010
3. ನಿಗಮದ ಪತ್ರ ಸಂಖ್ಯೆ MD RGRHCL 01 BIS 03 2010, Date: 29.06.2010
4. ಸರ್ಕಾರದ ಆದೇಶ ಸಂಖ್ಯೆ: ವಇ 86 ಹೆಚ್‌ಎಎಂ 2009, ಬೆಂಗಳೂರು, ದಿನಾಂಕ: 07.07.2010
5. ಸರ್ಕಾರದ ಆದೇಶ ಸಂಖ್ಯೆ: ವಇ 86 ಹೆಚ್‌ಎಎಂ 2009, ಬೆಂಗಳೂರು, ದಿನಾಂಕ: 24.09.2010

---

ಬಸವ ಇಂದಿರಾ ವಸತಿ ಯೋಜನೆಗೆ ಸಂಬಂಧಿಸಿದಂತೆ ಉಲ್ಲೇಖ (1) ರ ಸರ್ಕಾರಿ ಆದೇಶದ ಮೇರೆಗೆ ನಿಗಮದಿಂದ ಉಲ್ಲೇಖ (2)ರ ಮೂಲಕ ಆದೇಶ ಹೊರಡಿಸಿ ಪ್ರತಿ ತಾಲ್ಲೂಕುಗಳಲ್ಲಿ ಲಭ್ಯವಿರುವ ಗುಡಿಸಲುವಾಸಿಗಳ ಆಧಾರದ ಮೇಲೆ ಮೂರನೇ ಒಂದು ಭಾಗದಷ್ಟು ಗುರಿಯನ್ನು ನಿಗದಿಪಡಿಸಿ ಆದೇಶ ಹೊರಡಿಸಲಾಗಿತ್ತು. ಜೊತೆಗೆ ಉಲ್ಲೇಖ ಪತ್ರ (3) ರಲ್ಲಿ ಡಾ. ನಂಜುಂಡಪ್ಪ ವರದಿಯಲ್ಲಿ ಬರುವ ಹಿಂದುಳಿದ ತಾಲ್ಲೂಕುಗಳಿಗೂ ಸಹಾ ಗುರಿಯನ್ನು ನಿಗದಿಪಡಿಸಿ ಆದೇಶ ಹೊರಡಿಸಲಾಗಿತ್ತು.

ತದನಂತರ ಮಾನ್ಯ ಸಚಿವರ ಆದೇಶದ ಮೇರೆಗೆ ಹಾಗೂ ಸರ್ಕಾರದ ಉಲ್ಲೇಖ ಪತ್ರ (4) ರಲ್ಲಿ ತಿಳಿಸಿದ ನಿರ್ದೇಶನದ ಮೇರೆಗೆ ಈಗಾಗಲೇ ತಿಳಿಸಲಾಗಿದ್ದ ಮೂರನೇ ಒಂದು ಭಾಗದಷ್ಟು ಗುರಿಯ ಬದಲಿಗೆ ಪ್ರತಿ ವಿಧಾನಸಭಾ ಕ್ಷೇತ್ರಕ್ಕೆ 1000 ಮನೆಗಳನ್ನು ನೀಡಿ ಉಳಿದಂತೆ ತಿಳಿಸಲಾಗಿರುವ ನಿಯಮಗಳ ಮೇರೆಗೆ ಲಾಟರಿ ಮೂಲಕ ಆಯ್ಕೆ ಮಾಡಿ ನಿಗಮಕ್ಕೆ ಫಲಾನುಭವಿಗಳ ಪಟ್ಟಿಯನ್ನು ಸಲ್ಲಿಸಿ ಅನುಮೋದನೆ ಪಡೆದುಕೊಳ್ಳಲು ತಿಳಿಸಿರುವುದು ಸರಿಯಷ್ಟೆ.

ಮುಂದುವರೆದು ಈ ಪತ್ರದ ಮುಖಾಂತರ ತಿಳಿಸುತ್ತಿರುವುದೇನೆಂದರೆ, ಸರ್ಕಾರವು ಉಲ್ಲೇಖಿತ ಪತ್ರ (5) ರಲ್ಲಿ *"ಪ್ರತಿ ವಿಧಾನಸಭಾ ಕ್ಷೇತ್ರದಲ್ಲಿ ಗುಡಿಸಲುವಾಸಿಗಳಿಗೆ 1000 ಮನೆಗಳ ನಿರ್ಮಾಣಕ್ಕಾಗಿ ಆಯ್ಕೆ ಪ್ರಕ್ರಿಯೆ ಚಾಲನೆಯಲ್ಲಿದ್ದು, ಇನ್ನೂ ಹೆಚ್ಚು ಸಂಖ್ಯೆಯ ಅರ್ಹ ಫಲಾನುಭವಿಗಳು ಕಂಡು ಬಂದಲ್ಲಿ, ಆಯಾ ವಿಧಾನ ಸಭಾ ಕ್ಷೇತ್ರದಲ್ಲಿ ಹೆಚ್ಚುವರಿಯಾಗಿ 1000 ಮನೆಗಳ ನಿರ್ಮಾಣಕ್ಕಾಗಿ ಫಲಾನುಭವಿಗಳ ಆಯ್ಕೆ ಪ್ರಕ್ರಿಯೆಯನ್ನು ಪ್ರಾರಂಭಿಸಬಹುದಾಗಿದೆ. ಆಯ್ಕೆ ಪ್ರಕ್ರಿಯೆಗೆ ಸ್ವಲ್ಪ ಸಮಯಾವಕಾಶದ ಅವಶ್ಯಕತೆ ಇದ್ದು, ಆಯ್ಕೆ ಪ್ರಕ್ರಿಯ*



ನೋಂದಾಯಿತ ಕಛೇರಿ : ಸ.ನಂ. 205, ಬೀಡಿ ಕಾರ್ಮಿಕರ ಕಾಲೋನಿ ಎದುರು, ಕೊಮ್ಮಘಟ್ಟ ರಸ್ತೆ, ಬಂಡೇಮಠ, ಕೆಂಗೇರಿ ಉಪನಗರ, ಬೆಂಗಳೂರು – 560 060.

*ಪೂರ್ಣಗೊಂಡಲ್ಲಿ ಈಗಾಗಲೇ ಬಿಡುಗಡೆ ಮಾಡಿರುವ ಹಣದ ಲಭ್ಯತೆಗನುಗುಣವಾಗಿ ಮನೆಗಳ ನಿರ್ಮಾಣ ಕೈಗೊಳ್ಳಬಹುದಾಗಿದೆಯೆಂದು ತಿಳಿಸಿರುತ್ತದೆ."*

ಸರ್ಕಾರದ ನಿರ್ದೇಶನದನ್ವಯ ಕೂಡಲೇ ಈ ಕೆಳಕಂಡಂತೆ ಕ್ರಮಗಳನ್ನು ತೆಗೆದುಕೊಳ್ಳಲು ತಿಳಿಸಿದೆ.

1. ಮೊದಲನೆಯದಾಗಿ ತಿಳಿಸುವುದೇನೆಂದರೆ, ಪ್ರತಿ ವಿಧಾನಸಭಾ ಕ್ಷೇತ್ರದಲ್ಲಿ ಲಭ್ಯವಿರುವ ಗುಡಿಸಲುವಾಸಿಗಳ ಪೈಕಿ 1000 ಅರ್ಹ ಗುಡಿಸಲುವಾಸಿಗಳನ್ನು, ಉಲ್ಲೇಖ ಪತ್ರ (2)ರಲ್ಲಿ ತಿಳಿಸಿದಂತೆ ಆಯ್ಕೆ ಮಾಡಿ ನಿಗಮದ ಅನುಮೋದನೆಯನ್ನು ನಿಯಮಾನುಸಾರ ಪಡೆದುಕೊಳ್ಳುವುದು.
2. ಎರಡನೆಯದಾಗಿ ತಿಳಿಸುವುದೇನೆಂದರೆ, ಉಲ್ಲೇಖ ಪತ್ರ (3) ರಲ್ಲಿ ತಿಳಿಸಿರುವಂತೆ ಡಾ|| ಡಿ.ಎಂ. ನಂಜುಂಡಪ್ಪನವರ ವರದಿಯಲ್ಲಿ ಬರುವ 114 ತಾಲ್ಲೂಕುಗಳಿಗೆ ನೀಡಲಾದ ಗುರಿಗೆ ತಕ್ಕಂತೆ ಅರ್ಹ ಫಲಾನುಭವಿಗಳನ್ನು ಆಯ್ಕೆಗೊಳಿಸಿ ನಿಗಮದ ಅನುಮೋದನೆಯನ್ನು ನಿಯಮಾನುಸಾರ ಪಡೆದುಕೊಳ್ಳುವುದು.
3. ಮೊದಲ ಹಂತದಲ್ಲಿ ಪ್ರತಿ ವಿಧಾನಸಭಾ ಕ್ಷೇತ್ರಕ್ಕೆ ನೀಡಲಾದ 1000 ಮನೆಗಳ ಗುರಿಯನ್ನು ಆಯ್ಕೆ ಮಾಡಿ ನಿಗಮದ ಅನುಮೋದನೆ ಪಡೆದುಕೊಂಡ ನಂತರ ಹೆಚ್ಚುವರಿ ಗುರಿಗೆ ತಕ್ಕಂತೆ ಫಲಾನುಭವಿಗಳನ್ನು ಆಯ್ಕೆ ಮಾಡತಕ್ಕದ್ದು ಅಥವಾ ಮೊದಲ ಹಂತದಲ್ಲಿ ಜಾಗೃತಿ ಸಮಿತಿಯಲ್ಲಿ 1000 ಗುರಿಗೆ ಫಲಾನುಭವಿಗಳನ್ನು ಆಯ್ಕೆ ಮಾಡಿಕೊಂಡ ನಂತರ ಪ್ರತ್ಯೇಕವಾಗಿ ಹೆಚ್ಚುವರಿ 1000 ಮನೆಗಳ ಗುರಿಗೆ ಫಲಾನುಭವಿಗಳನ್ನು ಪ್ರತ್ಯೇಕವಾಗಿ ಆಯ್ಕೆ ಮಾಡಿಕೊಳ್ಳುವುದು.
4. ಯಾವುದೇ ಕಾರಣಕ್ಕೂ ಒಂದೇ ಬಾರಿಗೆ 2000 ಫಲಾನುಭವಿಗಳನ್ನು ಆಯ್ಕೆ ಮಾಡಿದ್ದಲ್ಲಿ ನಿಗಮದ ಅನುಮೋದನೆ ನೀಡಲಾಗುವುದಿಲ್ಲ. ಆದಕಾರಣ ಹೆಚ್ಚುವರಿ ಗುರಿಗೆ ತಕ್ಕಂತೆ ಪ್ರತ್ಯೇಕವಾಗಿ ಫಲಾನುಭವಿಗಳನ್ನು ಆಯ್ಕೆ ಮಾಡಿ ನಿಗಮದ ಮುಂದಿನ ಕ್ರಮಕ್ಕಾಗಿ ಮಾತ್ರ ಸಲ್ಲಿಸಬೇಕು. ಸರ್ಕಾರದಿಂದ ನಿಗಮಕ್ಕೆ ಹಂತ ಹಂತವಾಗಿ ಬಿಡುಗಡೆಯಾಗುವ ಅನುದಾನದ ಲಭ್ಯತೆ ಆಧಾರದ ಮೇಲೆ ಅಥವಾ ~~ಸರ್ಕಾರದ ನಿರ್ದೇಶನದ ಮೇರೆಗೆ ಸದರಿ ಹೆಚ್ಚುವರಿ ಪಟ್ಟಿಗೆ ಅನುಮೋದನೆ ನೀಡಲಾಗುವುದು.~~
5. ಯಾವುದೇ ಕಾರಣಕ್ಕೂ ಈ ಹೆಚ್ಚುವರಿ 1000 ಗುರಿಗೆ ಫಲಾನುಭವಿಗಳನ್ನು ಆಯ್ಕೆ ಮಾಡಿದ ತಕ್ಷಣ ಇವರು ಆಯ್ಕೆಯಾದ ಫಲಾನುಭವಿಗಳೆಂದು ಪರಿಗಣಿಸತಕ್ಕದ್ದಲ್ಲ.
6. ಬಸವ ಇಂದಿರಾ ವಸತಿ ಯೋಜನೆಯಡಿ ಎರಡು ಹಂತದಲ್ಲಿ ಹಾಗೂ ಎಸ್.ಡಿ.ಪಿ. ಯೋಜನೆಯಡಿ ಆಯ್ಕೆಯಾಗುವ ಗ್ರಾಮವಾರು ಹಾಗೂ ಪಂಚಾಯಿತಿವಾರು ವಿವರಗಳನ್ನು ಮೂರು ಕಾಲಂಗಳಲ್ಲಿ ಈ ಕೆಳಗೆ ತಿಳಿಸಿರುವಂತೆ ನಿಗಮಕ್ಕೆ ಫ್ಯಾಕ್ಸ್ ಮುಖೇನ ಕಳುಹಿಸಬೇಕು.

ಜಿಲ್ಲೆಯ ಹೆಸರು: ತಾಲ್ಲೂಕಿನ ಹೆಸರು:

| ವಿಧಾನ ಸಭಾ ಕ್ಷೇತ್ರದ ಹೆಸರು | ಗ್ರಾಮ ಪಂಚಾಯಿತಿ ಹೆಸರು | ಗ್ರಾಮದ ಹೆಸರು | ಮೊದಲ ಹಂತದಲ್ಲಿ ಲಾಟರಿ ಮೂಲಕ ಆಯ್ಕೆಯಾದ 1000 ಗುರಿಗೆ ಗ್ರಾಮವಾರು ವಿವರ | ಎರಡನೇ ಹಂತದಲ್ಲಿ ಲಾಟರಿ ಮೂಲಕ ಆಯ್ಕೆಯಾದ 1000 ಗುರಿಗೆ ಗ್ರಾಮವಾರು ವಿವರ | ಎಸ್.ಡಿ.ಪಿ. ಯೋಜನೆಯಡಿ ನೀಡಲಾದ ಗುರಿಗೆ ಆಯ್ಕೆಯಾದ ಗ್ರಾಮವಾರು ವಿವರ | ಒಟ್ಟು |
|---|---|---|---|---|---|---|
| | | | | | | |

ಒಂದು ವೇಳೆ ನಿಗದಿಪಡಿಸಿದ ಗುರಿಗೆ ತಕ್ಕಂತೆ ಆಯಾ ವಿಧಾನಸಭಾ ಕ್ಷೇತ್ರದಲ್ಲಿ ಗುಡಿಸಲುವಾಸಿಗಳು ಲಭ್ಯವಿಲ್ಲವಾದಲ್ಲಿ ಸದರಿ ಗುರಿಯನ್ನು ನಿಗಮಕ್ಕೆ ಅಧ್ಯರ್ಪಣೆ ಮಾಡಲು ತಿಳಿಸಿದೆ.

ಈ ಮೇಲೆ ತಿಳಿಸಿದ ಯೋಜನೆಗಳಡಿ ನೀಡಲಾದ ಎಲ್ಲಾ ಗುರಿಗೆ ತಕ್ಕಂತೆ ಲಾಟರಿ ಮೂಲಕ ಗ್ರಾಮಗಳನ್ನು ಆಯ್ಕೆ ಮಾಡಿ ಫಲಾನುಭವಿಗಳ ಪಟ್ಟಿಗೆ ಅನುಮೋದನೆ ನೀಡಲು ಈ ಕೆಳಕಂಡ ದಿನಾಂಕಗಳನ್ನು ಮರುನಿಗದಿಪಡಿಸಲಾಗಿದೆ.

| ಕ್ರಮ ಸಂಖ್ಯೆ | ಅಧಿಕಾರಿ/ಪ್ರಾಧಿಕಾರ | ಅಂತಿಮ ದಿನಾಂಕ |
|---|---|---|
| 1. | ಗುಡಿಸಲುವಾಸಿಗಳ ಪಟ್ಟಿಯನ್ನು ಗ್ರಾಮಪಂಚಾಯಿತಿಯ ಸಾಮಾನ್ಯ ಸಭೆಯಲ್ಲಿ ಅನುಮೋದಿಸಿ ಕಾರ್ಯನಿರ್ವಹಣಾಧಿಕಾರಿಗಳಿಗೆ ಸಲ್ಲಿಸಲು | 15.11.2010 |
| 2 | ಒಂದು ವೇಳೆ ಗ್ರಾಮಪಂಚಾಯಿತಿಯು 15.11.2010ರೊಳಗೆ ಆಯ್ಕೆ ಮಾಡದಿದ್ದಲ್ಲಿ ಸಂಬಂಧಿಸಿದ ತಾಲ್ಲೂಕಿನ ಕಾರ್ಯ ನಿರ್ವಹಣಾಧಿಕಾರಿಗಳು ಸದರಿ ಗುಡಿಸಲುವಾಸಿಗಳ ಪಟ್ಟಿಯನ್ನು ಜಾಗೃತಿ ಸಮಿತಿಗೆ ಮಂಡಿಸಲು | 30.11.2010 |
| 3. | ವಿಧಾನಸಭಾ ಜಾಗೃತಿ ಸಮಿತಿಯು ಅನುಮೋದನೆ ನೀಡಲು | 15.12.2010 |
| 4. | ಅನುಮೋದನೆಗೊಂಡ ಫಲಾನುಭವಿಗಳಿಗೆ ದಾಖಲೀಕರಣಗೊಳಿಸಿ ಅಂತಿಮವಾಗಿ ನಿಗಮದ ಅನುಮೋದನೆ ಪಡೆದುಕೊಳ್ಳಲು * | 31.12.2010 |

**ಸೂಚನೆ : * ಹೆಚ್ಚುವರಿಯಾಗಿ ಆಯ್ಕೆ ಮಾಡಲಾಗುವ 1000 ಫಲಾನುಭವಿಗಳಿಗೆ ದಾಖಲೀಕರಣ ಮಾಡಿಸುವ ಅಗತ್ಯವಿರುವುದಿಲ್ಲ. ನಿಗಮದ ಅನುಮೋದನೆ ದೊರೆತ ನಂತರ ಕಾರ್ಯಕ್ರಮ ಅನುಷ್ಠಾನದ ಅವಧಿಯಲ್ಲಿ ದಾಖಲೀಕರಣ ಮಾಡಿಸಿಕೊಳ್ಳುವುದು. ಉಳಿದಂತೆ ಮೊದಲ ಹಂತದಲ್ಲಿ ನೀಡಲಾದ 1000 ಫಲಾನುಭವಿಗಳಿಗೆ ಹಾಗೂ ಡಾ. ನಂಜುಂಡಪ್ಪ ಆಧಾರದ ಮೇಲೆ ನೀಡಲಾದ ಗುರಿಗೆ ತಕ್ಕಂತೆ ಆಯ್ಕೆಯಾಗುವ ಫಲಾನುಭವಿಗಳಿಗೆ ದಾಖಲೀಕರಣವನ್ನು ಮಾಡಿಸಿದ ನಂತರ ನಿಗಮದ ಅನುಮೋದನೆಯನ್ನು ಪಡೆದುಕೊಳ್ಳುವುದು.**

ಮೇಲೆ ತಿಳಿಸಿದಂತೆ ಕೂಡಲೇ ಕಾರ್ಯ ಪ್ರವೃತ್ತರಾಗಿ ಯೋಜನೆಯನ್ನು ಯಶಸ್ವಿಗೊಳಿಸಿ ಅರ್ಹ ಫಲಾನುಭವಿಗಳಿಗೆ ವಸತಿ ಸೌಕರ್ಯ ಕಲ್ಪಿಸಿಕೊಡಲು ಈ ಮೂಲಕ ಕೋರಲಾಗಿದೆ ಒಂದು ವೇಳೆ ನಿಗದಿತ ಅವಧಿಯೊಳಗೆ ಫಲಾನುಭವಿಗಳನ್ನು ಆಯ್ಕೆಗೊಳಿಸಿ ದಾಖಲೀಕರಣ ಮಾಡಿ ನಿಗಮದಿಂದ ಅನುಮೋದನೆಯನ್ನು ದಿನಾಂಕ 31.12.2010ರೊಳಗೆ ಪಡೆದುಕೊಳ್ಳದಿದ್ದಲ್ಲಿ ನೀಡಲಾದ ಗುರಿಯನ್ನು ನಿಗಮದಿಂದ ರದ್ದುಪಡಿಸಲಾಗುವುದು.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ

ಎನ್.ಎಸ್. ಮಹದೇವ ಪ್ರಸಾದ್
ಪ್ರಧಾನ ವ್ಯವಸ್ಥಾಪಕರು
(ಕಾರ್ಯಕ್ರಮ ಅನುಷ್ಠಾನ)

- ಪ್ರತಿಯನ್ನು ಎಲ್ಲಾ ವಿಧಾನಸಭಾ ಕ್ಷೇತ್ರದ ಶಾಸಕರುಗಳಿಗೆ ಮುಂದಿನ ಕ್ರಮಕ್ಕಾಗಿ ಕಳುಹಿಸಿಕೊಡಲಾಗಿದೆ.